ದಿಃ 29-01-2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಪ್ರತಿವಾದಿ ನಂಃ19 ಮತ್ತು 20 ಪರ ವಕೀಲರಾದ ಶ್ರೀ ಎಂ.ಕೆ. ಇವರಿಂದ ಪಾಟೀ ಸವಾಲುಃ

ನನ್ನ ಸ್ವಂತ ಊರು ಹರಿಹರ. ಈಗ ನಾನು ಹುಬ್ಬಳ್ಳಿಯಲ್ಲಿ ವಾಸವಾಗಿರುತ್ತೇನೆ. ಕಳೆದ 40 ವರ್ಷಗಳಿಂದ ನಾನು ಹುಬ್ಬಳ್ಳಿಯಲ್ಲಿ ವಾಸವಾಗಿರುತ್ತೇನೆ. ನಮ್ಮ ತಂದೆಯವರಿಗೆ ನಾವು ಒಟ್ಟು ಐದು ಜನ ಗಂಡು ಮಕ್ಕಳು ಮತ್ತು ಆರು ಜನ ಹೆಣ್ಣು ಮಕ್ಕಳು. ನಮ್ಮ ತಂದೆಗೆ ಸಂಬಂಧಪಟ್ಟಂತೆ ವಂಶವೃಕ್ಷದ ದಾಖಲೆಯನ್ನು ನಾನು ಸರ್ಕಾರಿ ಕಚೇರಿಯಿಂದ ಪಡೆದುಕೊಂಡಿಲ್ಲ. ನಾನು ಅಧೀಕೃತವಾದ ದಾಖಲೆಯನ್ನು ಪಡೆದುಕೊಳ್ಳದೇ ಇರುವುದರಿಂದ ನನ್ನ ತಂದೆಗೆ ಸಂಬಂಧಪಟ್ಟಂತೆ ವಂಶವೃಕ್ಷ ತೋರಿಸಲು ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ.

2. ನಾವು ನಾಲ್ಕು ಜನ ವಾದಿಯರು ಮತ್ತು ರಾದಾಬಾಯಿ ಸೇರಿಕೊಂಡು ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ಪ್ರತಿವಾದಿ ನಂಃ 1 ರಿಂದ 3 ಮತ್ತು 9 ಹಾಗೂ ನಮ್ಮ ನಡುವೆ ಯಾವುದೇ ಬಿನ್ನಾಭಿಪ್ರಾಯಗಳು ಇಲ್ಲ ಅಂದರೆ ಸರಿ. ನಾವು ನಾಲ್ಕು ಜನ ಮತ್ತು ರಾದಾಬಾಯಿ ಸೇರಿಕೊಂಡು ವಕೀಲರ ಬಳಿಗೆ ಹೋದಾಗ ನಮ್ಮ ಜೊತೆ ಗೇಣಿ ಮತ್ತು ಪಹಣಿ ಪತ್ರಿಕೆಗಳನ್ನು ಹಾಗೂ ಆಸ್ತಿಗಳ ನಂಬರ್‌ಗಳನ್ನು ತೆಗೆದುಕೊಂಡು ಹೋಗಿದ್ದೇವು. ಜಮೀನಿನ, ಮನೆ ಮತ್ತು ಜಾಗೆಯ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದೇವು. ನಾವು ದಾಖಲೆಗಳನ್ನು ತೆಗೆದುಕೊಂಡ ಸಮಯದಲ್ಲಿ ಜಮೀನಿನ ಖಾತೆ ನನ್ನ ತಂದೆಯ ಹೆಸರಿನಲ್ಲಿ ಇತ್ತು. ನಾವು ತೆಗೆದುಕೊಂಡು ಹೋದ ದಾಖಲೆಗಳು ಈ ಪ್ರಕರಣದಲ್ಲಿ ಹಾಜರುಪಡಿಸಲಾಗಿದೆಯೋ ಅಥವಾ ನಮ್ಮ ವಕೀಲರ ಬಳಿ ಇದೆಯೋ ಎಂಬುದರ ಕುರಿತು ನನ್ನ ಸಹೋದರಿಯಾದ ಮಂಜುಳಾ ವಾದಿ ನಂಃ3 ಇವಳ ಗಂಡನಾದ ಸುರೇಶ್ ಗೋಡ್‌ಕೆ ಇವರಿಗೆ ಗೊತ್ತು. ಈ ಕೇಸಿನ ದಾಖಲಾತಿಗಳ ಕುರಿತು ಮತ್ತು ಹೆಚ್ಚಿನ ಮಾಹಿತಿಯ ಬಗ್ಗೆ ಸುರೇಶ್ ಗೋಡ್‌ಕೆ ಇವರಿಗೆ ಗೊತ್ತು ಎಂಬ ಪ್ರಶ್ನೆಗೆ ಅವರಿಗೆ ಮತ್ತು ನಮಗೆ ಗೊತ್ತಿದೆ ಎಂಬ ಉತ್ತರ.

3. ಮೇಲೆ ಹೇಳಿದಾಗೆ ನಾನು ಪಡೆದುಕೊಂಡ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಮಾಡಿಲ್ಲ. ಮೇಲೆ ಹೇಳಿದಾಗೆ ನಾವೆಲ್ಲರೂ ವಕೀಲರ ಬಳಿಗೆ ಹೋದಾಗ ನಮ್ಮ ಜೊತೆ ವಾದಿ ನಂ:3 ಇವಳ ಗಂಡ ಸುರೇಶ್ ಗೋಡ್‌ಕೆ ಬಂದಿದ್ದನು. ಸುರೇಶ್ ಗೋಡ್‌ಕೆಯವರೇ ಈ ದಾವೆಗೆ ಬೇಕಾದಂತಹ ದಾಖಲೆಗಳನ್ನು ಸಂಗ್ರಹಿಸಿ ಮತ್ತು ಅದಕ್ಕೆ ಬೇಕಾದ ಮಾಹಿತಿಯನ್ನು ನೀಡಿರುತ್ತಾರೆ ಅಂದರೆ ಸರಿ.

4. ನಮ್ಮ ತಂದೆ 26 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ದಿನಾಂಕವಾಗಲೀ ಅಥವಾ ಇಸವಿ ಕುರಿತು ಹೇಳಲು ಬರುವುದಿಲ್ಲ. ದಿ: 16.03.1989 ರಂದು ನನ್ನ ತೀರಿಕೊಂಡಿರುತ್ತಾರೆ ಅಂದರೆ ಸರಿ.

5. ಒಟ್ಟು 12 ದಾವಾ ಸ್ವತ್ತುಗಳು ಇರುತ್ತವೆ. ಅದರ ಪೈಕಿ ಜಮೀನು 4 ಎಕರೆ ಮುಕ್ಕಾಲು ಗುಂಟೆ ಇರುತ್ತದೆ. ಉಳಿದಂತೆ ಐದಾರು ಮನೆಗಳು ಹಾಗೂ ಮೂರು ಗುಂಟೆ ಕ್ಷೇತ್ರದಷ್ಟು ಖುಲ್ಲಾ ಜಾಗೆ ಇದೆ. ಸದರಿ ಮನೆಗಳ ನಂಬರ್‌ಗಳು ನನಗೆ ಗೊತ್ತಿಲ್ಲ. ಅದೇ ಪ್ರಕಾರ 3 ಗುಂಟೆ ಖುಲ್ಲಾ ಜಾಗೆಯ ನಂಬರ್ ಕೂಡಾ ಗೊತ್ತಿಲ್ಲ. ಅವುಗಳ ಕುರಿತು ಸುರೇಶ್ ಗೋಡ್‌ಕೆ ಇವರಿಗೆ ಗೊತ್ತು. ಸುರೇಶ್ ಗೋಡ್‌ಕೆ ಇವರು ಹೇಳಿದ ಪ್ರಕಾರ ನಾನು ಹೇಳಿರುತ್ತೇನೆ ಅಂದರೆ ಸರಿ. ಸದರಿ ಖುಲ್ಲಾ ಜಾಗೆಯ ಚಕ್ಕುಬಂಧಿ ಹೇಳಲು ಬರುವುದಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ.

6. ಮೇಲೆ ಹೇಳಿದ ಆರು ಮನೆಗಳಿಗೆ ಸಂಬಂಧಪಟ್ಟಂತೆ ನನಗೆ ಚಕ್ಕುಬಂಧಿ ಹೇಳಲು ಬರುವುದಿಲ್ಲ. ಜಮೀನು ಹರಿಹರ ಪಟ್ಟಣದ ವ್ಯಾಪ್ತಿಯಲ್ಲಿ ಇದ್ದು ಅದರ ಸರ್ವೆ ನಂ: 68. ಅದು 4 ಎಕರೆ ಮುಕ್ಕಾಲು ಗುಂಟೆ ಇರುತ್ತದೆ. ಜಮೀನಿನ ಪಶ್ಚಿಮ ದಿಕ್ಕಿನಲ್ಲಿ ಗಿಡ್ಡ ಹನುಮಂತಪ್ಪ ಈತನ ಜಮೀನು, ಪೂರ್ವಕ್ಕೆ: ಚೆನ್ನಬಸಪ್ಪ ಈತನ ಜಮೀನು, ಉತ್ತರಕ್ಕೆ: ಕಲಾಲ್ ಗಂಗಪ್ಪಾ ಇವರ ಜಮೀನು

ಮತ್ತು ದಕ್ಷಿಣಕ್ಕೆಃ ರಾಷ್ಟ್ರಿಯ ಹೆದ್ದಾರಿ (ಬೈಪಾರಸ್ ರಸ್ತೆ). ಮೇಲ್ಕಂಡ ಜಮೀನು ಮೂಲತಃ ನನ್ನ ತಂದೆಗೆ ಸೇರಿದ ಜಮೀನು ಇರುತ್ತದೆ. ನನ್ನ ತಂದೆಗೆ ಆ ಜಮೀನು ಸರ್ಕಾರದಿಂದ ಬಂದಿರುತ್ತದೆ. ನನ್ನ ತಂದೆಯವರು ಒಬ್ಬರೇ ಸದರಿ ಜಮೀನನ್ನು ಉಳಿಮೆ ಮಾಡುತ್ತಿದ್ದರು ಎಂಬ ಕಾರಣಕ್ಕೆ ಅದು ಅವರಿಗೆ ಬಂದಿರುತ್ತದೆ. ನನ್ನ ತಂದೆಗೆ ಸರ್ಕಾರದಿಂದ ಜಮೀನು ಬಂದ ಕುರಿತು ದಾಖಲೆಗಳನ್ನು ಹಾಜರು ಮಾಡಿಲ್ಲ.

7. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇದ್ದ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಈ ದಾವೆಯಲ್ಲಿ ಯಾರು-ಯಾರನ್ನು ಪ್ರತಿವಾದಿಯರನ್ನಾಗಿ ಮಾಡಲಾಗಿದೆ ಎಂಬ ವಿಷಯ ನನಗೆ ಗೊತ್ತು. ಪ್ರತಿವಾದಿ ನಂಃ 19 ಮತ್ತು 20 ಇವರುಗಳು ನನ್ನ ಅಣ್ಣ-ತಮ್ಮಂದಿರಾಗಬೇಕು.

8. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಅಸಲು ದಾವಾ ನಂಃ 14/2002 ದಾಖಲಾಗಿತ್ತು ಎಂಬುದರ ಕುರಿತು ವಕೀಲರಿಗೆ ಮಾಹಿತಿ ಹೇಳಿಲ್ಲ. ಈ ಸಮಯದಲ್ಲಿ ನ್ಯಾಯವಾದಿಗಳು ಸಾಕ್ಷಿದಾರರಿಗೆ ಅವಳು ಮತ್ತು ಇತರೆ ವಾದಿಯರು ಸೇರಿ ಸಲ್ಲಿಸಿದ ವಾದ ಪತ್ರವನ್ನು ತೋರಿಸಿದಾಗ ಅದರ ಮೇಲೆ ತಮ್ಮ ಹೆಬ್ಬೆಟ್ಟಿನ ಗುರುತು ಇದೆ ಎಂದು ಒಪ್ಪಿಕೊಂಡಿರುತ್ತಾರೆ. ವಾದ ಪತ್ರವನ್ನು ವಕೀಲರು ತಯಾರಿಸಿದ ನಂತರ ಅದರಲ್ಲಿ ಬರೆದ ವಿಷಯವನ್ನು ನಮಗೆ ಓದಿ ಹೇಳಿದ ನಂತರ ಅದು ಸರಿ ಇದೆ ಎಂದು ತಿಳಿದು ಸಹಿ ಮಾಡಿರುತ್ತೇವೆ. ವಾದ ಪತ್ರದ ಜೊತೆ ನಾನು ಪ್ರಮಾಣಿಕರಿಸಿದ ಪ್ರಮಾಣ ಪತ್ರ ಇದ್ದು ಅದನ್ನು ಈಗ ನೋಡುತ್ತಿದ್ದು ಅದಕ್ಕೆ ನಾನು ಹೆಬ್ಬೆಟ್ಟಿನ ಸಹಿ ಮಾಡಿರುತ್ತೇನೆ.

9. ಈ ದಾವೆಯಲ್ಲಿ ಪ್ರತಿವಾದಿಯರು ಸಲ್ಲಿಸಿದ ತಕರಾರಿನ ಕುರಿತು ನಮ್ಮ ವಕೀಲರ ಕಡೆಯಿಂದ ತಿಳಿದುಕೊಂಡಿರುತ್ತೇನೆ. ಪ್ರತಿವಾದಿ ನಂಃ18 ರಾದಾಬಾಯಿ ನನ್ನ ಸಹೋದರಿ ಹಾಜರಾಗಿ ವಾದಿಯರಿಗೆ ಅನುಕೂಲವಾಗುವಂತೆ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಅಂದರೆ ಸರಿ. ಈ ದಾವೆಯಲ್ಲಿನ ಪ್ರತಿವಾದಿ

ನಂ:19 ಮತ್ತು 20 ಇವರುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರತಿವಾದಿಯರು ನಾವು ಕೇಳಿದ ಪರಿಹಾರವನ್ನು ಒಪ್ಪಿಕೊಂಡು ತಮ್ಮ ಪ್ರತಿವಾದ ಪತ್ರಗಳನ್ನು ಸಲ್ಲಿಸಿರುತ್ತಾರೆ ಅಂದರೆ ಸರಿ.

10. ಪ್ರತಿವಾದಿ ನಂ: 19 ಮತ್ತು 20 ಇವರುಗಳನ್ನು ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ಕಕ್ಷಿಗಾರರನ್ನಾಗಿ ಮಾಡಲಾಗಿದೆ ಎಂಬುದು ನನಗೆ ಗೊತ್ತಿಲ್ಲ. ನಾವು ಹಾಜರುಪಡಿಸಿದ ಜಮೀನು ದಾಖಲಾತಿಗಳಲ್ಲಿ ಪ್ರಸ್ತುತ ಪ್ರತಿವಾದಿ ನಂ: 19 ಮತ್ತು 20 ತಲಾ 2 ಎಕರೆ 8 ಗುಂಟೆ ಮತ್ತು 2 ಎಕರೆ 19 ವರೆ ಗುಂಟೆಗೆ ಸಂಬಂಧಪಟ್ಟಂತೆ ಹೆಸರುಗಳು ದಾಖಲಾಗಿವೆ ಅಂದರೆ ಸರಿ. ಸದರಿ ಪ್ರತಿವಾದಿಯರ ಹೆಸರಿನಲ್ಲಿ ಜಮೀನುಗಳು ಯಾವ ಆದಾರದ ಮೇಲಿಂದ ಬಂದವು ಗೊತ್ತಿಲ್ಲ. ಈ ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಪ್ರಕರಣಕ್ಕೆ ಸಂಬಂಧಪಟ್ಟಂತೆ ವಾದಿ ನಂ:3 ಇವಳ ಗಂಡ ಸುರೇಶ್ ಗೋಡ್‌ಕೆ ಹೇಳಿದ ಪ್ರಕಾರ ಹೇಳಿರುತ್ತೇನೆ.

11. ಮೇಲೆ ಹೇಳಿದಂತೆ ಮನೆಗಳಿಗೆ ಸಂಬಂಧಪಟ್ಟಂತೆ ಎಷ್ಟು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಗೊತ್ತಿಲ್ಲ. ಮನೆಗಳಿಗೆ ಸಂಬಂಧಪಟ್ಟಂತೆ ವಾದಿ ನಂ:3 ಇವಳ ಗಂಡನಾದ ಸುರೇಶ್ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ಈ ಸಮಯದಲ್ಲಿ ತೆರೆದ ನ್ಯಾಯಾಲಯದಲ್ಲಿ ವಾದಿ ನಂ:3 ಮಂಜುಳಾ ಬಾಯಿ ಹಾಜರಿರುತ್ತಾಳೆ. ಅಸಲು ದಾವಾ ನಂ: 14/2002 ದಾವೆಯ ದಾಖಲಾತಿಗಳನ್ನು ಸಂಗ್ರಹಿಸಲು ಪ್ರಯತ್ನ ಮಾಡಿಲ್ಲ. ಪ್ರತಿವಾದಿ ನಂ: 19 ಮತ್ತು 20 ಇವರುಗಳು ಸಲ್ಲಿಸಿದ ತಕರಾರಿನ ಕುರಿತು ಮತ್ತು ಯಾವ ಆದಾರದ ಮೇಲಿಂದ ಅವರು ತಮ್ಮ ಹಕ್ಕನ್ನು ಪ್ರತಿಪಾದಿಸಿರುತ್ತಾರೆ ಎಂಬುದರ ಬಗ್ಗೆ ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಈ ಕುರಿತು ತಿಳಿದುಕೊಂಡ ನಂತರ ಸದರಿ ಪ್ರತಿವಾದಿಯರಿಗೆ ಸಂಬಂಧಪಟ್ಟ ಆಸ್ತಿಗಳ ಬಗ್ಗೆ ದಾಖಲಾತಿಗಳನ್ನು ಪಡೆಯಲು ನಾನು ಪ್ರಯತ್ನಿಸಲಿಲ್ಲ.

ಈ ಸಮಯದಲ್ಲಿ ಪ್ರತಿವಾದಿ ನಂಃ 19 ಮತ್ತು 20 ಪರ ವಕೀಲರಾದ ಶ್ರೀ ಎಂ.ಕೆ. ಇವರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.